**ಜೈನ್ ಕಾಲೇಜ್, ಜಯನಗರ.**

**ಪ್ರಥಮ ಪಿ.ಯು.ಸಿ – ಮಾದರಿ ಪರೀಕ್ಷೆ – ಜನವರಿ – 2020**

**ಸಮಯ : 3.15 ಗಂಟೆ** **ವಿಷಯ:– ಕನ್ನಡ** **ಅಂಕಗಳು–100**

---

**ಅ–ವಿಭಾಗ**

**1. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **1X10=1**

1. ಭಾಷೆ ಹೀನರ ಕಂಡಾಗ ಏನಾಯಿತು?
2. ಮೃಗ ಪಕ್ಷಿಗಳು ಎಲ್ಲಿ ಆಡುತ್ತಿದ್ದವು?
3. ಅಮ್ಮಿಯು ಜಗತ್ತಿಗೆ ಎಂತಹ ಬಟ್ಟೆಗಳನ್ನು ತೊಡಿಸುವಳು?
4. ಜೀವದ ಸೆಲೆಗಳನ್ನು ಸುಡುತ್ತಿರುವುದು ಯಾವುದು?
5. ಹುಡುಗನಿಗೆ ಮಹಾತ್ಮ ಗಾಂಧಿ ಎಂಬ ಹೆಸರನ್ನು ಇಟ್ಟವರು ಯಾರು?
6. ನಿರೂಪಕರನ್ನು ರೂಪಿಸಿದ ಶಿಲ್ಪಿ ಯಾರು?
7. ಭರತನ ತಂದೆಯ ಹೆಸರೇನು?
8. ಬೋಳೆಶಂಕರ ಎಲ್ಲಿ ಕುಳಿತುಕೊಂಡು ಊಟ ಮಾಡಬೇಕೆಂದು ಅವನ ಅತ್ತಿಗೆ ಹೇಳುತ್ತಾಳೆ?
9. ಹುಡುಗಿಯರ ಹಾಡಿಗೆ ಬೋಳೆಶಂಕರ ಬಹುಮಾನವಾಗಿ ಏನನ್ನು ಕೊಡುತ್ತಾನೆ?
10. ಸೈನಿಕರು ಯಾವುದಕ್ಕೆ ಜಯವಾಗಲೆಂದು ಹಾಡಿದರು?

**ಆ– ವಿಭಾಗ**

**2. (ಅ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2X4=8**

11. ಕಾವೇರಿ ನದಿಯ ಮಹಿಮೆ ಎಂತಹದ್ದು?
12. ಮಳೆಯನ್ನು ನೋಡಿ ಕನ್ನಯ್ಯ ತನ್ನೊಳಗೆ ಏನೆಂದುಕೊಳ್ಳುತ್ತಾನೆ?
13. ಹಕ್ಕಿಗಳು ತಮ್ಮ ಕಂಠದಿಂದ ಏನನ್ನು ಮಾರ್ದನಿಸಬೇಕಿದೆ?
14. ನಗುವ ಚಂದಿರ ಏಕೆ ಕೈಗಂಟಿಕೊಳ್ಳುತ್ತಿದ್ದಾನೆ?
15. ಉಳ್ಳವರ ಆಶೆಯ ಪರಿಣಾಮಗಳೇನು?

**(ಆ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2X3=6**

16. ರಾಹುಕಾಲ, ಗುಳಿಕ ಕಾಲ, ಯಮಗಂಡಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
17. ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳು ಯಾವುವು?
18. ಸಾಲ ಕೇಳಲು ಹೋದ ಬಡರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳಾವುವು?
19. ನರಿಯನ್ನು ನಾಪಿತ ಹೇಗೆ ಗದರಿದನು?

**(ಇ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2X3=6**

20. ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?
21. ಕೋಡಂಗಿಯು ತಾನು ಬೆಳಿಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?
22. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
23. ಸೈತಾನನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

**ಇ– ವಿಭಾಗ**

**3. (ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **2X3=6**

24. ಗಾಂಡೀವಿಯಲ್ತು ಪಿನಾಕಪಾಣಿಯುಂ ನೆರೆಯನ್
25. ಗುಡಿ ಚರ್ಚು ಮಸೀದಿಗಳೆಲ್ಲಾ ಹಾರಿಹೋಗುತ್ತವೆ.
26. ನಿರಾಕಾರಮಾನಕ್ಕೆ ಹೊಲಿಗೆ ರೂಪ ನೀಡುತ್ತಾಳೆ.

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **1X3=3**

27. "ನೀನಿನ್ನೂ ನನ್ನನ್ನು ಕ್ಷಮಿಸಲಿಲ್ಲವೇ?"
28. ಇವೆರಡೊಂದಾಗಿ ನಡೆತಂದ ಬಳಿಕ ತಾವು ಉಳಿಯುವುದೆಂತು

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ **1X3=3**

29. ಜನ ಎಲ್ಲಿ ಸೇರಿದರೆ ಅಲ್ಲೇ ದರ್ಬಾರು.
30. ಬಂದುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ. ಹಿಂದೆ ಹಿಂದಲ್ಲ.

## ಈ– ವಿಭಾಗ

**4. (ಅ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ. 3X4=12**

31. ದುರ್ಯೋಧನನು ದುಶ್ಯಾಸನನ್ನು ಕಂಡು ವ್ಯಕ್ತಪಡಿಸಿದ ಭಾವನೆಗಳಾವುವು?
32. ಸೀತೆ ಕಲ್ಮರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ.
33. ಕರ್ನಾಟಕ ಎಂಬುದು 'ಬರೀ ಮಣ್ಣಿಗೆ ಹೆಸರಲ್ಲ' ಎಂಬುದನ್ನು ಕವಿ ಹೇಗೆ ಹೇಳಿದ್ದಾರೆ?
34. ಮತ್ತೇ ಸೂರ್ಯ ಬರುತ್ತಾನೆ' ಕವಿತೆಯ ಆಶಯವನ್ನು ಚರ್ಚಿಸಿ.

**(ಆ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ. 2X4=8**

35. ಕರಿಯನ ಜೀವನ ಹೇಗಿತ್ತು? ಜನರು ಆತನನ್ನು ಕಾಣುತ್ತಿದ್ದ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?
36. ಶಾಸ್ತ್ರೀ ಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ.
37. ಸಿಪಾಯಿದಂಗೆಯನ್ನು ರೈತದಂಗೆಯೆಂದು ಲೇಖಕರು ಏಕೆ ಕರೆದಿದ್ದಾರೆ?

**(ಇ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ. 2X4=8**

38. ಸೈನಿಕರು ಹಾಡಿದ ಸಿಟಿಯ ಹಾಡಿನ ಸಾರಾಂಶವೇನು?
39. ಬೋಳೆಶಂಕರ ತನ್ನ ಅಣ್ಣಂದಿರಿಗೆ ಸಿಪಾಯಿ ಮತ್ತು ನಾಣ್ಯಗಳನ್ನು ಮಾಡಿಕೊಡಲು ಏಕೆ ನಿರಾಕರಿಸುತ್ತಾರೆ?
40. ಸೈನಿಕರು ಏನೇನನ್ನು ನಾಶಮಾಡಿದರು ಎಂದು ಶಿವಪುರದ ಜನರು ಹೇಳುತ್ತಾರೆ?

## ಉ– ವಿಭಾಗ

**5. (ಅ) ಯಾವುದಾದರೂ ಒಂದು ಪದ್ಯಭಾಗವನ್ನು ಕುರಿತು ಭಾವಾರ್ಥ ಬರೆಯಿರಿ. 1X5=5**

41. ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಸನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು
ಲೋಕದರಸೇಗೈದೊಡಂ ತನ್ನ ಕಿಂಕರ
ರ್ಬೇಕುಬೇಡೆಂದು ಪೇಳರೆ ಭರತ ಶತ್ರುಘ್ನ
ರೀ ಕೆಲಸಕ್ಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ

42. ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ.

**(ಆ) ಈ ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ: 6X2=12**

43. ಈ ಪದಗಳ ಅರ್ಥ ಬರೆಯಿರಿ: ಕಿನಿಸು, ನಾಪಿತ
44. ಈ ಪದಗಳಿಗೆ ಸಮನಾರ್ಥಕಗಳನ್ನು ಬರೆಯಿರಿ: ಅಗ್ನಿ, ಕರಿ
45. ಈ ಪದಗಳಿಗೆ ತದ್ಭವ ಬರೆಯಿರಿ: ಪರ್ವ, ಪ್ರಯಾಣ
46. ಈ ದ್ವಿರುಕ್ತಿಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಬಣ್ಣಬಣ್ಣ, ಒಳಗೊಳಗೆ
47. ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ: ಕರ, ದೊರೆ
48. ಯವುದಾದರೂ ಎರಡು ಜೋಡಿಪದಗಳನ್ನು ಬರೆಯಿರಿ.
49. ಈ ಪದಗಳಿಗೆ ವಿರುದ್ಧಪದ ಬರೆಯಿರಿ: ಜೀವ, ಖಂಡ

**(ಇ) ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1X5=5**

50. ಯೋಗಾಭ್ಯಾಸ
51. ಮೊಬೈಲ್ ಬಳಕೆಯ ದುಷ್ಪರಿಣಾಮಗಳು

**(ಇ) ಈ ಕೆಳಗಿನಗಳಲ್ಲಿ ಒಂದನ್ನು ಕುರಿತು ಪತ್ರಲೇಖನ ಬರೆಯಿರಿ. 1X4=4**

52. ನಿಮ್ಮ ಪರೀಕ್ಷಾ ಸಿದ್ದತೆಯನ್ನು ವಿವರಿಸುತ್ತಾ ನಿಮ್ಮ ಗೆಳಯನಿಗೆ ಪತ್ರ ಬರೆಯಿರಿ.
53. ನಿಮ್ಮ ಊರಿಗೆ ಸೂಕ್ತವಾದ ರಸ್ತೆಯ ಸೌಲಭ್ಯವನ್ನು ಕಲ್ಪಿಸುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗೊಂದು ಪತ್ರ ಬರೆಯಿರಿ.

**(ಈ) ಈ ಕೆಳಗಿನ ಗಾದೆಮಾತುಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ. 1X4=4**

54. ಮಾಡಿದ್ದುಣ್ಣೋ ಮಹರಾಯ.
55. ಮಾತು ಬೆಳ್ಳಿ ಮೌನ ಬಂಗಾರ.

*** ಶುಭಂ ***